ಉದಯವಾಣಿ
ಕನ್ನಡ ದಿನಪತ್ರಿಕೆ

**Tuesday, October 19th, 2010**

ಕ್ಯಾಂಪಸ್

# ಜೈನ್ ಹೋ!

## ನಾವು ವಿಶ್ವಕ್ಕೆ ಮೊದಲಿಗರು



ಸ್ಪರ್ಧೆಯ ಮೊದಲ ದಿನ ವ್ಯಾನ್‌ನೂಯಸ್‌ನ ಪುಟ್ಟ ಏರ್‌ಪೋರ್ಟ್‌ನಲ್ಲಿ ಜಿಟಿ ಜಿಟಿ ಮಳೆ. ಅದೇ ಸ್ಪರ್ಧೆಯ ಕಡೆಯ ದಿನ ಬೆಂಗಳೂರಿನ ಜೈನ್ ಕಾಲೇಜು ವಿಜಯಿ ಎಂಬ ಘೋಷಣೆ ಕೇಳಿದಾಗ ಆ ಹುಡುಗರ ಮನದಲ್ಲಿ ಖುಷಿಯ ಮುಂಗಾರುಮಳೆ.

ನಿರೂಪ

ಕನಕಪುರ ಬೆಂಗಳೂರಿನ ದಟ್ಟ ಪ್ರಭಾವ ಹೊಂದಿರುವ ಬೆಂಗಳೂರು ಗ್ರಾಮಾಂತರ ವ್ಯಾಪ್ತಿಗೆ ಬರುವ ಜಿಲ್ಲೆ, ಅಲ್ಲಿ ಭಗವಾನ್ ಮಹಾವೀರ್ ಜೈನ್ ವಿಶ್ವವಿದ್ಯಾಲಯವಿದೆ. ಅಲ್ಲಿರುವ ವಿದ್ಯಾರ್ಥಿಗಳೊಂದು ಮೈಲುಗಲ್ಲು ನೆಟ್ಟಿದ್ದಾರೆ. ಇನ್ನು ಅದನ್ನು ಕೀಳುವುದು ಸಾಧ್ಯವಾಗದ ಮಾತು, ಆದರೆ ಅದನ್ನು ದಾಟಿ ಮುಂದೆ ಹೋಗಬಹುದು. ಏಕೆಂದರೆ ಅದೇ ಮೊದಲನೇ ಮೈಲುಗಲ್ಲು. ಅಂದರೆ ಅಮೆರಿಕದ ಕ್ಯಾಲಿಫೋರ್ನಿಯಾದ ವ್ಯಾನ್ ನೂಯಸ್‌ನಲ್ಲಿ ಮಾರ್ಚ್ 5ರಿಂದ ಮೂರು ದಿನಗಳವರೆಗೆ ನಡೆದ ಏರ್‌ಕ್ರಾಫ್ಟ್ ಡಿಸೈನ್‌ನ ಥಿಯರಿ ಪ್ರೆಸೆಂಟೇಷನ್‌ನಲ್ಲಿ ಈ ಹುಡುಗರು ಮೊದಲಿಗರಾಗಿದ್ದಾರೆ. ಇನ್ನು ಗೊಂದಲ ನಿಮ್ಮಲ್ಲಿದ್ದರೆ ಸ್ವಲ್ಪ ವಿವರಣೆ ಅಗತ್ಯವಿದೆ ಎನಿಸುತ್ತದೆ.

ಅಮೆರಿಕದ ಸೊಸೈಟಿ ಆಫ್ ಆಟೋಮೋಟಿವ್ ಎಂಜಿನಿಯರ್ಸ್ ಎಂಬ ಸಂಸ್ಥೆ ವಿಮಾನ ವಿನ್ಯಾಸದ ಕುರಿತಂತೆ ಜಾಗತಿಕವಾಗಿ ಸ್ಪರ್ಧೆಗಳನ್ನು ನಡೆಸುತ್ತದೆ. ಈ ಬಾರಿ ನಡೆದ ಸ್ಪರ್ಧೆಗೆ 'ನಾಸಾ' ಮತ್ತು 'ಲಾಕ್‌ಹೀಡ್' ಸಂಸ್ಥೆಗಳ ಸಹಕಾರವಿತ್ತು. ಅಲ್ಲಿ ತಮ್ಮದೇ ಆದ ವಿಮಾನ ವಿನ್ಯಾಸಗಳೊಡನೆ ಹಾಜರಾಗಿದ್ದ ವಿಶ್ವದ ವಿವಿಧ ರಾಷ್ಟ್ರಗಳ 44 ತಂಡಗಳ ನಡುವೆ ಜೈನ್ ಕಾಲೇಜು ಹುಡುಗರು ಗೆದ್ದು ಬಂದರು.

ಈ ಬಾರಿಯ ಸ್ಪರ್ಧೆಯಲ್ಲಿದ್ದುದು ಭಾರತದ ಜೈನ್ ಕಾಲೇಜು ವಿದ್ಯಾರ್ಥಿಗಳು ಮಾತ್ರವಲ್ಲ, ಜಮ್ಷೆಡ್‌ಪುರ ಮತ್ತು ದೆಹಲಿಯ ಇನ್ನೆರಡು ತಂಡಗಳು ಭಾಗವಹಿಸಿದ್ದವು. ಈ ಸ್ಪರ್ಧೆಯಲ್ಲಿ ಮೂರು ರೀತಿಗಳಿವೆ. ಅವು- ಅಡ್ವಾನ್ಸ್ಡ್ ಕ್ಲಾಸ್, ರೆಗ್ಯುಲರ್ ಕ್ಲಾಸ್, ಮೈಕ್ರೋ ಕ್ಲಾಸ್. ಉಳಿದ ಎರಡು ತಂಡಗಳು ಭಾಗವಹಿಸಿದ್ದು ಸ್ವಲ್ಪ ಸುಲಭವೇ ಎನ್ನಬಹುದಾದ ರೆಗ್ಯುಲರ್ ಕ್ಲಾಸ್‌ನ ಸ್ಪರ್ಧೆಯಲ್ಲಿ, ಆದರೆ ಜೈನ್ ವಿದ್ಯಾರ್ಥಿಗಳ ಪ್ರತಿಭೆ ನಿರ್ಧಾರವಾಗಬೇಕಿದ್ದುದು ಅತ್ಯಂತ ಕಷ್ಟದ ಮೈಕ್ರೋಕ್ಲಾಸ್‌ನಲ್ಲಿ.

ಅದಕ್ಕಾಗಿ ಜೈನ್ ಹುಡುಗರು ಕಳೆದ ಎರಡು ವರ್ಷಗಳಿಂದ ನಿರಂತರವಾಗಿ ಅಭ್ಯಾಸ ಮಾಡುತ್ತಿದ್ದರು. 2009ರ ಅಕ್ಟೋಬರ್‌ನಿಂದ ಜನವರಿವರೆಗೆ ವಿವಿಧ ರೀತಿಯ ವಿಮಾನ ವಿನ್ಯಾಸಗಳನ್ನು ಪ್ರಯೋಗ ಮಾಡಿದ್ದರು. ಬೆಂಗಳೂರಿನ ಜಕ್ಕೂರು ವಿಮಾನ ನಿಲ್ದಾಣದ ವೈಮಾನಿಕ ತಜ್ಞರಿಂದ ಸಹಾಯವನ್ನೂ ಪಡೆದಿದ್ದರು. ಅಂತಿಮ ಮೂರು ವಿಮಾನಗಳ ವಿನ್ಯಾಸಕ್ಕೆ ಮುಂಚೆ 6 ಮಾದರಿಗಳನ್ನು ಸಿದ್ಧಪಡಿಸಿದ್ದರು. ಅವರ ತಂಡದಲ್ಲಿದ್ದವರು 8 ಮಂದಿ. ಆದರೆ ಕಾಲೇಜ್ ಒಪ್ಪಿಗೆ ಕೊಟ್ಟಿದ್ದು 4 ಮಂದಿಗೆ ಮಾತ್ರ. ಹಾಗಾಗಿ ಉಳಿದ ನಾಲ್ವರು ಕನಕಪುರದಲ್ಲಿ ಉಳಿದರೂ ಸಾಧನೆಯಲ್ಲಿ ಅವರ ಪಾಲಿನ ಮಹತ್ವ ಕಡಿಮೆಯೇನಲ್ಲ.

ಯಾವುದೇ ಸಾಹಸವನ್ನು ಮಾಡುವಾಗ ಹಲವಾರು ವೈರುಧ್ಯಗಳು ಎದುರಾಗುತ್ತವೆ. ಇಲ್ಲೂ ಪರಿಸ್ಥಿತಿಯ ಅನಿರೀಕ್ಷಿತ ಸವಾಲುಗಳಿಗೆ ನಿರೀಕ್ಷಿತ ಉತ್ತರ ನೀಡದಿದ್ದರೆ ಎರಡು ವರ್ಷಗಳ ಪ್ರಯತ್ನ ಜೈನ್ ಕಾಲೇಜಿಗೆ ಸೀಮಿತ ವಾಗಿರುತ್ತಿತ್ತು. ಇದು ಭಾರತದ ಪರಿಸರ. ಇಲ್ಲಿ ಹೊಂದಿಕೆ ಯಾಗಿರುವ ಉಪಕರಣಗಳು ಅಮೆರಿಕದಲ್ಲಿ ಸಹಕರಿಸುತ್ತವೆ ಎಂಬ ಖಾತ್ರಿ ಇಲ್ಲ. ಜೊತೆಗೆ ಭಾರತದಿಂದ ಅಮೆರಿಕಕ್ಕೆ ಉಪಕರಣಗಳನ್ನು ವಿಮಾನದಲ್ಲಿ ಕೊಂಡೊಯ್ಯುವುದೊಂದು ಸಮಸ್ಯೆ. ವಿಮಾನದಲ್ಲಿ ಇಷ್ಟೇ ವಸ್ತುಗಳನ್ನು ಸಾಗಿಸಬೇಕು ಎಂದಿರುತ್ತದೆ. ಆದರೆ ಯಾವ ಉಪಕರಣಗಳು ಸ್ಪರ್ಧೆಯ ಸಮಯದಲ್ಲಿ ಗೈರುಹಾಜರಾಗುವಂತಿಲ್ಲ, ಹಾಜರಾತಿ ಕೊಡುವುದಕ್ಕೆ ಅಧಿಕಾರಿಗಳ ಒಪ್ಪಿಗೆಯಿಲ್ಲ. ಹಾಗಾಗಿ 3 ಮಾದರಿಗಳನ್ನು ಕೊಂಡೊಯ್ಯಬೇಕಾಯಿತು. ಈ ತಕರಾರುಗಳೆಲ್ಲ ಸ್ಥಳೀಯರಿಗಿಲ್ಲ, ಅವರು ತಮ್ಮ ಕಾರಿನ ಟ್ರಾಲಿಗೆ ಒಂದು ರೂಮಿನಷ್ಟು ಉಪಕರಣಗಳನ್ನು ಹಾಕಿಕೊಂಡು ಸ್ಪರ್ಧಾ ಸ್ಥಳಕ್ಕೆ ತಂದುಬಿಡುತ್ತಾರೆ.

ಅಮೆರಿಕದ ವಾತಾವರಣಕ್ಕೆ ಹೊಂದಿಕೊಳ್ಳುವ ಕಾರಣದಿಂದಲೇ ಜೈನ್ ಹುಡುಗರು ಅಮೆರಿಕಕ್ಕೆ ಮೂರು ದಿನ ಮುಂಚೆ ಹೋದರು. ಅಲ್ಲಿ ಎದುರಾಗಿದ್ದು ಮತ್ತೊಂದು ಸವಾಲು. ಅಮೆರಿಕದಲ್ಲಿ ಯಾವುದೇ ವಿಮಾನಗಳನ್ನು ಪರವಾನಗಿ ಇಲ್ಲದೇ ಹಾರಿಸುವಂತಿಲ್ಲ, ಹಾಗೆ ಹಾರಿಸುವುದಾದರೆ ಪರವಾನಗಿ ಇರುವ ವ್ಯಕ್ತಿಗಳ ಸಹಾಯ ತೆಗೆದುಕೊಳ್ಳಬೇಕು. ಅದಕ್ಕೆ ಹುಡುಗರು ಆಯ್ಕೆ ಮಾಡಿಕೊಂಡಿದ್ದು 'ಟೋನಿ' ಎಂಬ ಫ್ಲೈಯರ್ ಒಬ್ಬರನ್ನು, ಅವರೊಡನೆ ವಿಮಾನ ಹಾರಾಟದ ಪರೀಕ್ಷೆ ನಡೆಸುವಾಗ ಮೊದಲನೇ ಮಾದರಿಯ ಆಯಸ್ಸು ಅಲ್ಲೇ ಮುಗಿಯಿತು. ಉಳಿದಿದ್ದು ಎರಡು ಮಾದರಿಗಳು! ಟೋನಿ ನೀಡಿದ ಸಹಕಾರ ಸಲಹೆಗಳು ಅವರಿಗೆ ಮಾರ್ಗದರ್ಶಕವಾಯಿತು.

ತ್ರಿಕೋಣಾಕೃತಿ (ಡೆಲ್ಟಾ ಪ್ಲಾನ್ ಫಾರ್ಮ್) ಇರುವ 600 ಗ್ರಾಮ್ ತೂಕದ, 800 ಗ್ರಾಂ ತೂಕವನ್ನು ಹೊರಬಲ್ಲ ಪುಟ್ಟ ಮಾದರಿ ಇವರದು. ಅಲ್ಲೂ ಸಂಸ್ಥೆಯಿಂದಲೇ ನಿರ್ದಿಷ್ಟ ವಿನ್ಯಾಸ, ಇಷ್ಟೇ ಅಳತೆ ಇರಬೇಕೆಂಬ ನಿಯಮವಿರುತ್ತದೆ. 17 ಇಂಚು ಉದ್ದ 13 ಅಗಲ, 5.625 ಎತ್ತರ ಇರಬೇಕು. ಮತ್ತದನ್ನು ಕೇವಲ 3 ನಿಮಿಷಗಳಲ್ಲಿ ಜೋಡಿಸಬೇಕು. ಮಾದರಿ ಸಿದ್ಧಪಡಿಸಲು ರೆಕ್ಕೆಗಳಿಗಾಗಿ ಹೈಡೆನ್ಸಿಟಿ ಥರ್ಮಾಕೋಲ್, ಬಾಲ್ಸಾ ಎಂಬ ಹಗುರ ಮರವನ್ನು ಉಳಿದ ಅಂಗಗಳಿಗಾಗಿ ಬಳಸಲಾಯಿತು. ರೇಡಿಯೋ ಕಂಟ್ರೋಲರ್ ಮೂಲಕ ಅದರ ನಿಯಂತ್ರಣ. ಬೇಕಾಗಿರುವ ಎಲ್ಲ ಉಪಕರಣಗಳು ಬಂದಿದ್ದು ವಿದೇಶದಿಂದಲೇ. ಹಾಗೆಯೇ ಪ್ರಶಸ್ತಿಯೂ...

ಸ್ಪರ್ಧೆಯ ಮೊದಲ ದಿನ ವ್ಯಾನ್‌ನೂಯಸ್‌ನ ಪುಟ್ಟ ಏರ್‌ಪೋರ್ಟ್‌ನಲ್ಲಿ ಮಳೆ. ಆ ದಿನದ ಸಂಜೆ ಹೊತ್ತಿಗೆ 4 ತಂಡಗಳು ಮಾತ್ರ ಸ್ಪರ್ಧೆ ನಡೆಸಿದವು. ಅದರಲ್ಲಿ ಜೈನ್ ಕಾಲೇಜು ಕೂಡ ಇತ್ತು. ಒಟ್ಟು ಮೂರು ದಿನದ ವಿಮಾನ ಹಾರಿಸುವ ಸ್ಪರ್ಧೆಯಲ್ಲಿ ಇವರಿಗೆ ಸಿಕ್ಕಿದ್ದು 3ನೇ ಸ್ಥಾನ. ಯಶಸ್ಸಿನ ಹಾರಾಟ ಶುರುವಾಗಿದ್ದು, ಮತ್ತೊಂದು ದಿಕ್ಕಿನಲ್ಲಿ, ವಿಮಾನ ವಿನ್ಯಾಸದ ಕುರಿತು ನೀಡುವ ವಿವರಣೆ ಸಾಮಾನ್ಯದ ಕೆಲಸವಲ್ಲ, ಅಲ್ಲಿ ಹಲವರ ಪ್ರಶ್ನೆಗೂ ಉತ್ತರಿಸಬೇಕಾಗಿರುತ್ತದೆ. ಆ ಕೆಲಸವನ್ನು ಸಮರ್ಪಕವಾಗಿ ಮಾಡಿದರು. ಗೆದ್ದರು. ಭಾರತದ ಯಾವ ತಂಡಗಳೂ ಮಾಡದ ಸಾಧನೆಯೊಂದು ಅಲ್ಲಿ ದಾಖಲಾಗಿತ್ತು.

### ಜೊತೆಯಲ್ಲಿದ್ದವರು

ಈ ಹೆಮ್ಮೆಯಲ್ಲಿ ಹಲವರ ಪಾಲಿದೆ. ಕಾಲೇಜಿನ ಸೆಂಟರ್ ಫಾರ್ ಎಮರ್ಜಿಂಗ್ ಟೆಕ್ನಾಲಜಿ ವಿಮಾನದ ಉಪಕರಣ ತರಿಸುವುದರಿಂದ ಹಿಡಿದು ತಾಂತ್ರಿಕ ಸಹಾಯ ನೀಡುವವರೆಗೆ ತನ್ನ ಸಹಾಯ ನೀಡಿದೆ. ಚಂದನ್‌ಪ್ರಸಾದ್, ಎನ್.ಆರ್. ದರ್ಶನ್, ಅನುರಾಗ್ ಜೋಶಿ, ಶ್ರೇಯಸ್ ರೆಡ್ಡಿ, ನಿಖಿಲ್ ಪಾಂಡೆ, ಡಿ.ಎಸ್. ರವಿತೇಜ, ಜಾರ್ಜ್ ಮ್ಯಾಥ್ಯೂ ಸ್ಪರ್ಧೆಯಲ್ಲಿದ್ದ ವಿದ್ಯಾರ್ಥಿಗಳು. ಡಾ। ಕೃಷ್ಣ ವೆಂಕಟೇಶ್, ಎಂ.ಎಸ್. ಸಂತೋಷ್, ಟಿ.ಪಿ. ನಿತಿನ್, ಕೃಷ್ಣ ಕಿಶೋರ್, ಟಿ.ಎನ್. ನವೀನ್, ಎಸ್. ಪ್ರಜ್ವಲ್ ಅವರು ಶಿಕ್ಷಕರಾಗಿ ವಿದ್ಯಾರ್ಥಿಗಳನ್ನು ಮುಂದೆ ಕೊಂಡೊಯ್ದವರು.